

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 05-04-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಪ್ರಸ್ತಾಪಿಸಲಿರುವ ಬದರೀ ಸಹಾಬರಲ್ಲಿ ಪ್ರಥಮ ಹೆಸರು ಹಝ್ರತ್ ಖರಾಶ್ ಬಿನ್ ಸಿಮತ್ ಅನ್ಸಾರಿ(ರ). ಅವರು ಖಝ್ರಜ್ ಗೋತ್ರದ ಬನೂ ಜಶ್ಮ್ ಶಾಖೆಗೆ ಸೇರಿದ್ದರು. ಅವರು ಬದರ್ ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಅವರಿಗೆ ಹತ್ತು ಗಾಯಗಳಾಗಿದ್ದುವು. ಅವರು ನಿಷ್ಣಾತ ಬಿಲ್ಲುಗಾರರಲ್ಲಿ ಒಬ್ಬರಾಗಿದ್ದರು. ಬದರ್ ಯುದ್ಧದಲ್ಲಿ ಅವರು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಳಿಯ (ಮಗಳ ಪತಿ) ಅಬುಲ್ ಆಸ್‌ರನ್ನು ಸೆರೆ ಹಿಡಿದಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಉಬೈದ್ ಬಿನ್ ತೇಹಾನ್(ರ). ಅವರು ಬೈಅತೆ ಅಖಬದಲ್ಲಿ ಭಾಗವಹಿಸಿದ ಎಪ್ಪತ್ತು ಅನ್ಸಾರ್‌ಗಳಲ್ಲಿ ಒಬ್ಬರಾಗಿದ್ದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಬೈದ್ ಮತ್ತು ಹಝ್ರತ್ ಮಸ್‌ಊದ್ ಬಿನ್ ರಬೀಅ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಅವರು ತನ್ನ ಸಹೋದರ ಹಝ್ರತ್ ಅಬುಲ್ ಹೈಸಮ್ ಜೊತೆಗೆ ಬದರ್ ಯುದ್ಧದಲ್ಲಿ ಭಾಗವಹಿಸಿದರು. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಅಬೂ ಹನ ಮಾಲಿಕ್ ಬಿನ್ ಅಮರ್(ರ). ಅಬೂ ಹನ ಅವರ ಉಪನಾಮ. ಅವರ ಹೆಸರು ಮಾಲಿಕ್ ಬಿನ್ ಅಮರ್. ಮುಹಮ್ಮದ್ ಬಿನ್ ಉಮರ್ ವಾಖಿದಿ, ಅವರನ್ನು ಬದರೀ ಸಹಾಬರಲ್ಲಿ ಒಬ್ಬರಾಗಿ ಗಣಿಸಿದ್ದಾರೆ. ಇನ್ನೊಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಝೈದ್ ಬಿನ್ ಸಅಲಬ(ರ). ಅವರ ಉಪನಾಮ ಅಬೂ ಮುಹಮ್ಮದ್. ಅವರ ಪಿತ ಹಝ್ರತ್ ಝೈದ್ ಬಿನ್ ಸಅಲಬ ಸಹ ಸಹಾಬಿ ಆಗಿದ್ದರು. ಅವರು ಖಝ್ರಜ್ ಗೋತ್ರದ ಬನೂ ಜಶಮ್ ಶಾಖೆಗೆ ಸೇರಿದ್ದರು. ಅವರು ಬೈಅತೆ ಅಖಬದ ಎಪ್ಪತ್ತು ಅನ್‌ಸಾರ್‌ಗಳಲ್ಲಿ ಸೇರಿದ್ದರು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಮಕ್ಕದ ವಿಜಯದ ಸಮಯದಲ್ಲಿ ಬನೂ ಹಾರಿಸ್ ಬಿನ್ ಖಝ್ರಜ್‌ರ ಪತಾಕೆ ಅವರ ಕೈಯಲ್ಲಿತ್ತು. ಹಝ್ರತ್ ಅಬ್ದುಲ್ಲಾ ಬಿನ್ ಝೈದ್ ಮುಸ್ಲಿಮರಾಗುವ ಮೊದಲೇ ಅರಬಿ ಭಾಷೆ ಬರೆಯಲು ಕಲಿತಿದ್ದರು. ಅವರಿಗೆ ಸ್ವಪ್ನದಲ್ಲಿ ಅಝಾನ್ ಶಬ್ದಗಳು ಕೇಳಿಸಿದ್ದುವು. ಅವರು ಅದರ ಬಗ್ಗೆ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದಾಗ ಅವರು ಹಝ್ರತ್ ಬಿಲಾಲ್‌ರಿಗೆ ಆ ಶಬ್ದಗಳನ್ನು ಬಳಸಿ ಅಝಾನ್ ನೀಡಲು ಆಜ್ಞಾಪಿಸಿದರು. ಇದು ಮಸ್‌ಜಿದ್ ನಬವಿ ನಿರ್ಮಿಸಿದ ನಂತರ ಹಿಜರಿ ವರ್ಷ ಒಂದರಲ್ಲಿ ನಡೆದ ಘಟನೆಯಾಗಿದೆ. ಇದರ ಬಗ್ಗೆ ಹಝ್ರತ್ ಅಬೂ ಉಮೈರ್ ಬಿನ್ ಅನಸ್ ತನ್ನ ಚಿಕ್ಕಪ್ಪಂದಿರಿಂದ ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝ್‌ಗೆ ಜನರನ್ನು ಹೇಗೆ ಜಮಾಯಿಸುವುದು ಎಂದು ಯೋಚಿಸುತ್ತಿದ್ದರು. ಅವರಿಗೆ ಹೀಗೆ ಸಲಹೆ ನೀಡಲಾಯಿತು: ನಮಾಝ್ ಸಮಯದಲ್ಲಿ ಒಂದು ಪತಾಕೆ ಹಾರಿಸಬೇಕು. ಆಗ ಜನರು ಅದನ್ನು ನೋಡಿ ಒಬ್ಬರಿನ್ನೊಬ್ಬರಿಗೆ ತಿಳಿಸುವರು. ಆದರೆ ಈ ಸಲಹೆಯನ್ನು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಂಗೀಕರಿಸಲಿಲ್ಲ. ಅನಂತರ ಅವರೊಂದಿಗೆ ಕಹಳೆ ಬಗ್ಗೆ ಪ್ರಸ್ತಾಪಿಸಿದಾಗ ಅದು ಯಹೂದಿಗಳ ರೀತಿ ಎಂದು ಹೇಳಿ ಅದನ್ನು ಸಹ ಅಂಗೀಕರಿಸಲಿಲ್ಲ. ಅನಂತರ ಗಂಟೆ ಬಾರಿಸುವ ಬಗ್ಗೆ ಪ್ರಸ್ತಾಪಿಸಿದಾಗ ಅದು ನಸಾರಗಳ ರೀತಿ ಎಂದು ಹೇಳಿದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಚಿಂತಾಮಗ್ನರಾಗಿರುವ ಬಗ್ಗೆ ಹಝ್ರತ್ ಅಬ್ದುಲ್ಲಾ ಬಿನ್ ಝೈದ್ ಸಹ ಚಿಂತಾಮಗ್ನರಾಗಿ ಮನೆಗೆ ಬಂದು ಪ್ರಾರ್ಥಿಸಿದರು. ಆಗ ಕನಸಿನಲ್ಲಿ ಅವರಿಗೆ ಅಝಾನ್ ತೋರಿಸಲಾಯಿತು. ಅವರು ಹೇಳುತ್ತಾರೆ: ನಾನು ಸ್ವಪ್ನದಲ್ಲಿ ಒಬ್ಬ ವ್ಯಕ್ತಿಯನ್ನು ಕಂಡೆನು. ಅವನ ಕೈಯ್ಯಲ್ಲಿ ಶಂಖವಿತ್ತು. ನಾನು ಹೇಳಿದೆ: ಈ ಶಂಖವನ್ನು ಮಾರಾಟ ಮಾಡುವಿಯೋ? ಅವನು ಕೇಳಿದನು: ನೀನು ಅದನ್ನು ಏನು ಮಾಡುವೆ? ನಾನು ಹೇಳಿದೆ: ಅದರ ಮೂಲಕ ಜನರನ್ನು ನಮಾಝ್‌ಗೆ ಕರೆಯುವೆನು. ಆಗ ಆ ವ್ಯಕ್ತಿ ಹೇಳಿದನು: ನಾನು ಅದಕ್ಕಿಂತ ಉತ್ತಮವಾದ ರೀತಿಯನ್ನು ತಿಳಿಸಲೇ? ನಾನು ಹೇಳಿದೆ: ತಿಳಿಸಿರಿ. ಅನಂತರ ಆ ವ್ಯಕ್ತಿ ಅಝಾನ್ ಶಬ್ದಗಳನ್ನು ಉಚ್ಚರಿಸಿದನು.

**ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್**
**ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್**
**ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹ್**
**ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹ್**
**ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್**
**ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್**
**ಹಯ್ಯಅಲ ಸ್ಸಲಾತ್, ಹಯ್ಯಅಲ ಸ್ಸಲಾತ್**
**ಹಯ್ಯಅಲಲ್ ಫಲಾಹ್, ಹಯ್ಯಅಲಲ್ ಫಲಾಹ್**
**ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್**
**ಲಾ ಇಲಾಹ ಇಲ್ಲಲ್ಲಾಹ್.**

ಇದರ ಭಾಷಾಂತರ ಹೀಗಿದೆ: ಅಲ್ಲಾಹ್ ಎಲ್ಲರಿಗಿಂತ ದೊಡ್ಡವನು ಎಂದು ನಾಲ್ಕು ಸಲ. ಅಲ್ಲಾಹನ ಹೊರತು ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲ ಎಂದು ನಾನು ಸಾಕ್ಷ್ಯ ಹೇಳುತ್ತೇನೆ ಎಂದು ಎರಡು ಸಲ. ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನ

ಸಂದೇಶವಾಹಕರೆಂದು ನಾನು ಸಾಕ್ಷಿ ಹೇಳುತ್ತೇನೆ ಎಂದು ಎರಡು ಸಲ. ನಮಾಝ್ ಕಡೆಗೆ ಬನ್ನಿರಿ ಎಂದು ಎರಡು ಸಲ. ವಿಜಯದ ಕಡೆಗೆ ಬನ್ನಿರಿ ಎಂದು ಎರಡು ಸಲ. ಅನಂತರ ಅಲ್ಲಾಹನು ಎಲ್ಲರಿಗಿಂತ ದೊಡ್ಡವನು ಎಂದು ಎರಡು ಸಲ. ಕೊನೆಗೆ ಲಾಇಲಾಹ ಇಲ್ಲಲ್ಲಾಹ್ – ಅಲ್ಲಾಹನ ಹೊರತು ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲ ಎಂದು ಹೇಳಬೇಕು. ಅನಂತರ ಆ ವ್ಯಕ್ತಿ ಸ್ವಲ್ಪ ಹಿಂದೆ ಸರಿದು ಹೇಳಿದನು: ನಮಾಝ್ ನಿರ್ವಹಿಸಲು ನಿಂತಾಗ ಹೀಗೆ ಹೇಳಬೇಕು:

**ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್**
**ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹ್**
**ಅಶ್‌ಹದು ಅನ್ನ ಮುಹಮ್ಮದರ್‍ರಸೂಲುಲ್ಲಾಹ್**
**ಹಯ್ಯಅಲಸ್ಸಲಾತ್, ಹಯ್ಯಅಲಲ್ ಫಲಾಹ್**
**ಖದ್ ಖಾಮತಿಸ್ಸಲಾತ್, ಖದ್ ಖಾಮತಿಸ್ಸಲಾತ್**
**ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್**
**ಲಾ ಇಲಾಹ ಇಲ್ಲಲ್ಲಾಹ್.**

ಬೆಳಗ್ಗೆ ನಾನು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಹೋದೆನು. ಮತ್ತು ನನ್ನ ಸ್ವಪ್ನದಲ್ಲಿ ಕಂಡದ್ದನ್ನು ಹೇಳಿದೆ. ಅವರು ಹೇಳಿದರು: ನಿಶ್ಚಯವಾಗಿಯೂ ದೇವರಿಚ್ಛಿಸಿದರೆ ಇದು ಸತ್ಯವಾದ ಸ್ವಪ್ನವಾಗಿದೆ. ನೀವು ಬಿಲಾಲ್ ಜೊತೆ ನಿಂತು ನೀವು ಕಂಡ ಹಾಗೆ ಹೇಳಿರಿ. ನಾನು ಬಿಲಾಲ್ ಜೊತೆಗೆ ನಿಂತು ಬಿಲಾಲ್‌ರಿಗೆ ಹೇಳಿಕೊಟ್ಟ ಹಾಗೆ ಅವರು ಅಝಾನ್ ನೀಡಿದರು.

ವರದಿಗಾರ ಹೇಳುತ್ತಾರೆ: ಹಝ್ರತ್ ಉಮರ್‌ಬಿನ್ ಖತ್ತಾಬ್ ರಳಿಯಲ್ಲಾಹು ಅನ್‌ಹು ಈ ಅಝಾನ್ ಆಲಿಸುವಾಗ ಮನೆಯಲ್ಲಿದ್ದರು. ಅವರು ತಮ್ಮ ಚಾದರವನ್ನು ಎಳೆದುಕೊಂಡು ಹೊರಹೊರಟರು. ಅವರು ಹೇಳಿದರು: "ಓ ರಸೂಲುಲ್ಲಾಹ್, ನಿಮ್ಮನ್ನು ಸತ್ಯದೊಂದಿಗೆ ಕಳುಹಿಸಿದವನ ಹೆಸರಲ್ಲಿ ಆಣೆಹಾಕಿ ಹೇಳುತ್ತೇನೆ, ಅಬ್ದುಲ್ಲಾ ಬಿನ್ ಝೈದ್ ನೋಡಿದ ಹಾಗೆಯೇ ನಾನು ಸಹ ನೋಡಿದ್ದೇನೆ. ಆಗ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಸರ್ವಸ್ತುತಿಗಳು ಅಲ್ಲಾಹನಿಗೆ ಸಲ್ಲುವುವು. ಒಂದು ವರದಿ ಹೀಗೆ ಸಹ ಇದೆ: ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಝಾನ್ ಶಬ್ದವನ್ನು ಆಲಿಸಿದಾಗ ಹೇಳಿದರು: ಈ ರೀತಿ ನನಗೆ ವಹೀ ಸಹ ಲಭಿಸಿದೆ ಎಂದು.

ಅಝಾನ್ ಬಗ್ಗೆ ಸ್ವಪ್ನ ಕಂಡ ಹಝ್ರತ್ ಅಬ್ದುಲ್ಲಾ ಬಿನ್ ಝೈದ್ ತನ್ನ ಎಲ್ಲ ಸಂಪತ್ತನ್ನು ದಾನಧರ್ಮವಾಗಿ ನೀಡಿದರು. ಆಗ ಅವರ ಪಿತ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹೇಳಿದರು: ಯಾ ರಸೂಲುಲ್ಲಾಹ್ ಅಬ್ದುಲ್ಲಾ ಬಿನ್ ಝೈದ್ ತನ್ನ ಎಲ್ಲಾ ಸಂಪತ್ತನ್ನು ದಾನಧರ್ಮವಾಗಿ ನೀಡಿದ್ದಾನೆ. ಆಗ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಝ್ರತ್ ಅಬ್ದುಲ್ಲಾ ಬಿನ್ ಝೈದರನ್ನು ಕರೆದು ಹೇಳಿದರು: ಅಲ್ಲಾಹನು ನಿಶ್ಚಯವಾಗಿಯೂ ನಿನ್ನ ಸದಖ ಸ್ವೀಕರಿಸಿದ್ದಾನೆ. ನೀನು ಅದನ್ನು ನಿನ್ನ ಬಳುವಳಿಯಾಗಿ ನಿನ್ನ ತಂದೆ ತಾಯಂದಿರಿಗೆ ಮರಳಿಸು. ಒಮ್ಮೆ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ತನ್ನ ಉಗುರನ್ನು ತಬರ್‍ರುಕ್ ಆಗಿ ನೀಡಿದ್ದರು. ಅದರ ಬಗ್ಗೆ ಹೀಗೆ ವಿವರಿಸಲಾಗಿದೆ: ಹಝ್ರತ್ ಅಬ್ದುಲ್ಲಾ ಬಿನ್ ಝೈದ್‌ರ ಪುತ್ರ ಮುಹಮ್ಮದ್ ಹೇಳುತ್ತಾರೆ: ಅವರ ಪಿತ ಹಜ್ಜತುಲ್ ವಿದಾ ದಿನದಂದು ಮಿನಾ ಮೈದಾನದಲ್ಲಿ ಮೃಗ ಬಲಿ ನೀಡುವ ಸ್ಥಳದಲ್ಲಿ ಬಲಿದಾನ ನೀಡುವಾಗ ಹಾಜರಿದ್ದರು. ಅವರ ಜೊತೆ ಇನ್ನೊಬ್ಬ ಅನ್‌ಸಾರ್ ಸಹ ಇದ್ದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಲಿ ನೀಡಿದ ಮೃಗಗಳ ಮಾಂಸ ಹಂಚಿದಾಗ ಹಝ್ರತ್ ಅಬ್ದುಲ್ಲ ಬಿನ್ ಝೈದ್ ಮತ್ತು ಅವರ ಅನ್‌ಸಾರಿ ಸಂಗಡಿಗನಿಗೆ ಏನೂ ಸಿಗಲಿಲ್ಲ. ಆಗ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂದು ಬಟ್ಟೆಯಲ್ಲಿ ತನ್ನ ತಲೆಗೂದಲು ಕತ್ತರಿಸಿ ಹಾಕಿ ಜನರಿಗೆ ಹಂಚಿದರು. ಅನಂತರ ತನ್ನ ಉಗುರನ್ನು ಕತ್ತರಿಸಿ ಹಝ್ರತ್ ಅಬ್ದುಲ್ಲಾ ಬಿನ್ ಝೈದ್ ಮತ್ತು ಅವರ ಸಂಗಡಿಗನಿಗೆ ನೀಡಿದರು.

ಅಲ್ಲಾಮ ಝುರ್‌ಖಾನಿ ಬರೆಯುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ಝೈದ್ ತನ್ನ ತೋಟದಲ್ಲಿ ಕೆಲಸ ಮಾಡುತ್ತಾ ಇದ್ದಾಗ ಅವರ ಪುತ್ರ ಅವರ ಬಳಿಗೆ ಬಂದು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದರೆಂದು ತಿಳಿಸಿದರು. ಆಗ ಹಝ್ರತ್ ಅಬ್ದುಲ್ಲಾ ಬಿನ್ ಝೈದ್ ಹೇಳಿದರು: **ಅಲ್ಲಾಹುಮ್ಮ ಅಝ್‌ಹಿಬ್ ಬಸರೀ ಹತ್ತಾ ಲಾ ಅರಾ ಬಅದ ಹಬೀಬಿ ಮುಹಮ್ಮದಿನ್ ಅಹದ**. ಓ ಅಲ್ಲಾಹ್, ನೀನು ನನ್ನ ದೃಷ್ಟಿಯನ್ನು ತೆಗೆದುಬಿಡು. ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ನಂತರ ನಾನು ಯಾರನ್ನೂ ನೋಡದಂತಾಗಲಿ. ಅನಂತರ ಕ್ರಮೇಣ ಅವರು ದೃಷ್ಟಿಹೀನರಾದರೆಂದೂ ಕೊನೆಗೆ ಅಂಧರಾದರೆಂದೂ ಹೇಳಲಾಗುತ್ತಿದೆ. ಅವರು ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಉಸ್ಮಾನ್‌ರ(ರ) ಖಿಲಾಫತ್ತಿನ ಕೊನೆಯ ಭಾಗದಲ್ಲಿ ಹಿಜರಿ ವರ್ಷ 32ರಲ್ಲಿ ಮದೀನದಲ್ಲಿ ಅವರು ನಿಧನ ಹೊಂದಿದರು. ಆಗ ಅವರ ಪ್ರಾಯ 64 ಆಗಿತ್ತು. ಅವರ ನಮಾಝೆ ಜನಾಝ ಹಝ್ರತ್ ಉಸ್ಮಾನ್(ರ) ನಿರ್ವಹಿಸಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಮುಆಝ್ ಬಿನ್ ಅಮರ್ ಬಿನ್ ಜಮೂಹ್(ರ). ಅವರು ಬನೂ ಖಝ್‌ರಜ್ ಗೋತ್ರದ ಬನೂ ಸಲ್ಮಾ ಶಾಖೆಯವರಾಗಿದ್ದರು. ಅವರು ಬೈಅತೆ ಅಖಬ ಸಾನಿಯ ಮತ್ತು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರ ಪಿತ ಹಝ್ರತ್ ಅಮರ್ ಬಿನ್ ಜಮೂಹ್ ಸಹ ಸಹಾಬಿಯಾಗಿದ್ದು ಅವರು ಉಹುದ್ ಯುದ್ಧದಲ್ಲಿ ಶಹೀದರಾಗಿದ್ದರು. ಅವರ ತಾಯಿಯ ಹೆಸರು ಹಿಂದ್ ಬಿನ್ತ್ ಅಮರ್. ಹಝ್ರತ್ ಮುಆಝ್ ಬೈಅತೆ ಅಖಬ ಸಾನಿಯದಲ್ಲಿ ಭಾಗವಹಿಸಿದ್ದರು. ಆಗ ಅವರ ಪಿತ ಅಮರ್ ಬಿನ್ ಜಮೂಹ್ ತನ್ನ ಬಹುದೇವಾರಾಧಕ ವಿಶ್ವಾಸದಲ್ಲಿ ಬಹಳ ಕಠಿಣವಾಗಿ ಸ್ಥಿರವಾಗಿದ್ದರು. ಸೀರತ್ ಇಬ್ನು ಹಿಶಾಮ್‌ನಲ್ಲಿ ಹಝ್ರತ್ ಮುಆಝರ ಪಿತ ಇಸ್ಲಾಮ್ ಧರ್ಮಕ್ಕೆ ಸೇರಿದ ಬಗ್ಗೆ ಈ ರೀತಿ ವಿವರಿಸಲಾಗಿದೆ. ಬೈಅತೆ ಸಾನಿಯದಲ್ಲಿ ಭಾಗವಹಿಸಿದವರು ಮದೀನಕ್ಕೆ ಮರಳಿ ಬಂದು ಇಸ್ಲಾಮಿನ ಪ್ರಚಾರ ಬಹಳ ಮಾಡಿದರು. ಅವರ

ಕೋಮಿನಲ್ಲಿ ಕೆಲವು ಹಿರಿಯರು ತಮ್ಮ ಬಹುದೇವಾರಾಧಕ ವಿಶ್ವಾಸದಲ್ಲಿ ಸ್ಥಿರವಾಗಿದ್ದರು. ಅವರಲ್ಲೊಬ್ಬ ಅಮರ್ ಬಿನ್ ಜಮೂಹ್ ಆಗಿದ್ದರು. ಅಮರ್ ಬಿನ್ ಜಮೂಹ್ ಬನೂ ಸಲ್ಮಾ ಗೋತ್ರದ ನಾಯಕರಲ್ಲೊಬ್ಬರಾಗಿದ್ದರು. ಅವರು ಮನೆಯಲ್ಲಿ ಮರದ ಒಂದು ವಿಗ್ರಹ ನಿರ್ಮಿಸಿ ಇರಿಸಿದ್ದರು. ಅದನ್ನು ಅವರು ಪೂಜಿಸುತ್ತಿದ್ದರು. ಬೈಅತೆ ಅಖಬ ಸಾನಿಯದ ನಂತರ ಹಝ್ರತ್ ಮುಆಝ್ ಬಿನ್ ಜಬಲ್ ಮತ್ತು ಹಝ್ರತ್ ಮುಆಝ್ ಬಿನ್ ಅಮರ್ ಬಿನ್ ಜಮೂಹ್ ರಾತ್ರಿ ಹೊತ್ತು ಅಮರ್ ಬಿನ್ ಜಮೂಹರ ಪೂಜಾಗೃಹದಲ್ಲಿ ಪ್ರವೇಶಿಸಿ ಆ ವಿಗ್ರಹವನ್ನು ಎತ್ತಿಕೊಂಡು ಬನೂ ಸಲ್ಮಾ ಗೋತ್ರದವರು ಕಸಕಡ್ಡಿ ಹಾಕುತ್ತಿದ್ದ ಹೊಂಡಕ್ಕೆ ಎಸೆದುಬಿಟ್ಟರು. ಬೆಳಗ್ಗೆ ಎದ್ದಾಗ ಅಮರ್ ಹೇಳಿದರು, ನಿನಗೆ ಬಹಳ ಕೆಟ್ಟದಾಯಿತು. ರಾತ್ರಿ ನಮ್ಮ ಆರಾಧ್ಯ ಮೂರ್ತಿಯ ಜೊತೆ ಹಗೆತನದಿಂದ ವರ್ತಿಸಿದುದು ಯಾರು? ಅವರು ತನ್ನ ವಿಗ್ರಹವನ್ನು ಹುಡುಕುತ್ತಾ ಹೋಗಿ ಅದನ್ನು ಕಂಡಾಗ ಅವರು ಅದನ್ನು ಎತ್ತಿಕೊಂಡು ಸ್ವಚ್ಛಮಾಡಿ ಹೇಳಿದರು: ನಿನ್ನೊಂದಿಗೆ ಹೀಗೆ ವರ್ತಿಸಿದವರು ಯಾರೆಂದು ನನಗೆ ತಿಳಿದರೆ ದೇವನಾಣೆ ನಾನು ಅವನನ್ನು ಹೀನೈಸುವೆನು. ರಾತ್ರಿ ಅಮರ್ ನಿದ್ರಿಸುವಾಗ ಅವರ ಪುತ್ರ ಪುನಃ ಹಿಂದಿನ ಹಾಗೆ ಮಾಡುತ್ತಿದ್ದರು. ಒಂದು ರಾತ್ರಿ ಅಮರ್ ತನ್ನ ಖಡ್ಗವನ್ನು ವಿಗ್ರಹದ ಕೊರಳಿಗೆ ತೂಗು ಹಾಕಿ ಹೇಳಿದರು: ನಿನ್ನೊಂದಿಗೆ ಹೀಗೆ ವರ್ತಿಸುವುದು ಯಾರೆಂದು ಅಲ್ಲಾಹನಾಣೆ ನನಗೆ ತಿಳಿದಿಲ್ಲ. ನಿನಗೆ ಶಕ್ತಿ ಇದ್ದರೆ ಅವನನ್ನು ತಡೆ. ರಾತ್ರಿ ಅಮರ್ ನಿದ್ರಿಸಿದಾಗ ಆ ಯುವಕರು ವಿಗ್ರಹದೊಂದಿಗೆ ಹಿಂದಿನ ಹಾಗೆ ವರ್ತಿಸಿದರು. ಬೆಳಗ್ಗೆ ಅಮರ್ ಎದ್ದಾಗ ತನ್ನ ವಿಗ್ರಹ ಕಾಣದಾದಾಗ ಅದನ್ನು ಹುಡುಕಲು ಹೊರಟರು. ಅವರು ಒಂದು ಬಾವಿಯ ಬಳಿಗೆ ಹೋದಾಗ ತನ್ನ ವಿಗ್ರಹ ತಲೆ ಕೆಳಗಾಗಿ ಸತ್ತ ನಾಯಿಯೊಂದಿಗೆ ಕಟ್ಟಿ ಬಾವಿಗೆ ಹಾಕಿರುವುದಾಗಿ ಕಂಡರು. ಅಮರ್ ಆ ದೃಶ್ಯವನ್ನು ಕಂಡಾಗ ಅವರಿಗೆ ವಾಸ್ತವಿಕತೆ ಅರಿವಾಯಿತು. ಅವರ ಕೋಮಿನ ಜನರು ಸಹ ಅವರಿಗೆ ಇಸ್ಲಾಮಿನ ಉಪದೇಶಗಳನ್ನು ನೀಡಿದರು. ಅಮರ್ ಅಲ್ಲಾಹನ ಕಾರುಣ್ಯದಿಂದ ಇಸ್ಲಾಮಿಗೆ ಸೇರಿದರು.

ಹಝ್ರತ್ ಮುಆಝ್ ಬಿನ್ ಅಮರ್ ಬಿನ್ ಜಮೂಹ್, ಅಬೂ ಜಹಲನನ್ನು ಹತ್ಯೆ ಮಾಡಿದವರೊಂದಿಗೆ ಸೇರಿದ್ದರು. ಹಝ್ರತ್ ಮುಆಝ್ ಬಿನ್ ಅಮರ್ ಮತ್ತು ಹಝ್ರತ್ ಮುಆಝ್ ಬಿನ್ ಇಫ್ರಾ ಅಬೂ ಜಹಲನನ್ನು ಆಕ್ರಮಿಸಿ ಕೊಂದಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಅಬೂಜಹಲನ ತಲೆಯನ್ನು ಕಡಿದು ಹಾಕಿದರು. ಹಝ್ರತ್ ಅನಸ್ ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಬೂಜಹಲನ ಸ್ಥಿತಿಯ ಬಗ್ಗೆ ಯಾರು ನೋಡಿಕೊಂಡು ಬರುವರು? ಹಝ್ರತ್ ಇಬ್ನು ಮಸ್‌ಊದ್ ಹೋಗಿ ನೋಡಿದರು. ಇಫ್ರಾನ ಇಬ್ಬರು ಪುತ್ರರಾದ ಮುಆಝ್ ಮತ್ತು ಮಊಝ್ ಅವನನ್ನು ಖಡ್ಗದಿಂದ ಕಡಿದ ಕಾರಣ ಅವನು ಮರಣಾಸನ್ನನಾಗಿದ್ದನು. ಹಝ್ರತ್ ಇಬ್ನು ಮಸ್‌ಊದ್ ಕೇಳಿದರು: ನೀನು ಅಬೂಜಹಲ್ ಅಲ್ಲವೇ? ಅಬೂಜಹಲ್ ಹೇಳಿದನು: ನೀವು ನನಗಿಂತ ಶ್ರೇಷ್ಠನಾದ ಯಾರನ್ನೂ ಕೊಂದಿಲ್ಲ.

ಹಝ್ರತ್ ಝೈನುಲ್ ಆಬಿದೀನ್ ವಲಿಯುಲ್ಲಾ ಶಾ ಸಾಹಿಬರು ಅಬೂಜಹಲನನ್ನು ಹತ್ಯೆ ಮಾಡಿದವರ ಬಗ್ಗೆ ಇರುವ ಭಿನ್ನಾಭಿಪ್ರಾಯಗಳನ್ನು ಪರಿಹರಿಸುತ್ತಾ ಹೇಳುತ್ತಾರೆ: ಕೆಲವು ವರದಿ ಪ್ರಕಾರ ಇಫ್ರಾನ ಇಬ್ಬರು ಪುತ್ರರಾದ ಮಊಝ್ ಮತ್ತು ಮುಆಝ್ ಅಬೂಜಹಲನನ್ನು ಮೃತ್ಯುವಿಗೆ ಸಮೀಪಗೊಳಿಸಿದರು. ಅನಂತರ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಅಬೂಜಹಲನ ಶಿರವನ್ನು ದೇಹದಿಂದ ಬೇರ್ಪಡಿಸಿದರು. ಇಮಾಮ್ ಇಬ್ನು ಹಜರ್ ಹೇಳುತ್ತಾರೆ: ಮುಆಝ್ ಬಿನ್ ಆಮರ್ ಮತ್ತು ಮುಆಝ್ ಬಿನ್ ಇಫ್ರಾ ನಂತರ ಮಊಝ್ ಬಿನ್ ಇಫ್ರಾ ಸಹ ಅಬೂಜಹಲನನ್ನು ಆಕ್ರಮಿಸಿರಬಹುದು. ಏಕೆಂದರೆ ಮೊದಲಿನ ಎರಡು ವರದಿಗಳಲ್ಲಿ ಈ ಇಬ್ಬರು ಸಹೋದರರ ಬಗ್ಗೆ ಪ್ರಸ್ತಾಪಿಸಲಾಗಿದೆ. ಎರಡನೆಯ ವರದಿಯಲ್ಲಿ ಇಬ್ಬರು ವಿಭಿನ್ನ ವ್ಯಕ್ತಿಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಶರಹ್ ಫತ್‌ಹುಲ್ ಬಾರಿ ಎಂಬ ಗ್ರಂಥದಲ್ಲಿ ಈ ಮೂವರೂ ಸೇರಿರಬಹುದೆಂದು ಬರೆಯಲಾಗಿದೆ.

ಒಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಅಬೂಜಹಲ್ ಸಾಯುವಾಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್‌ರೊಂದಿಗೆ ಹೇಳಿದನು: ನೀನು ಆತನೊಂದಿಗೆ (ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ) ಹೇಳು: ನಾನು ನನ್ನ ಜೀವಿತದಲ್ಲಿ ಅವರ ಶತ್ರುವಾಗಿದ್ದೆ. ಈಗ ಸಹ ನಾನು ಅವರ ಕಡು ಶತ್ರುವಾಗಿದ್ದೇನೆ. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಅಬೂಜಹಲನ ರುಂಡವನ್ನು ಕಡಿದು ಅದನ್ನು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ತಂದರು. ಆಗ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ಅಲ್ಲಾಹನ ಸನ್ನಿಧಿಯಲ್ಲಿ ಎಲ್ಲಾ ಪ್ರವಾದಿಗಳಿಗಿಂತ ಹೆಚ್ಚು ಗೌರವಾನ್ವಿತನಾಗಿರುವ ಹಾಗೆಯೇ ನನ್ನ ಸಮುದಾಯ ಅಲ್ಲಾಹನ ದೃಷ್ಟಿಯಲ್ಲಿ ಇತರ ಎಲ್ಲಾ ಸಮುದಾಯಗಳಿಗಿಂತ ಹೆಚ್ಚು ಗೌರವಾನ್ವಿತವಾಗಿರುವ ಹಾಗೆಯೇ ನನ್ನ ಸಮುದಾಯದ ವಿರೋಧಿಯಾದ ಫಿರ್‌ಔನ್ ಇತರ ಎಲ್ಲಾ ಸಮುದಾಯಗಳಿಗೆ ವಿರೋಧಿಗಳಾಗಿದ್ದ ಫಿರ್‌ಔನ್‌ಗಳಿಗಿಂತ ಹೆಚ್ಚು ತೀವ್ರ ಸ್ವರೂಪದ ಉಗ್ರನಾಗಿದ್ದಾನೆ. ಇದಕ್ಕೆ ಕಾರಣವೇನೆಂದರೆ, **ಹತ್ತಾ ಇದಾ. ಅದ್‌ರಕಹುಲ್‌ಗರಖು ಖಾಲ ಆಮನ್‌ತು ಅನ್ನಹು ಲಾಇಲಾಹ ಇಲ್ಲಲ್ಲದೀ. ಆಮನತ್‌ಬಿಹೀ ಬನೂ ಇಸ್ರಾಈಲ್.** ಫಿರ್‌ಔನ್‌ನು ಮುಳುಗಿ ಸಾಯುವ ಸಂದರ್ಭದಲ್ಲಿ ಹೇಳಿದ್ದನು, ಬನೀ ಇಸ್ರಾಈಲ್ ಜನತೆ ನಂಬುವ ದೇವನ ಹೊರತು ಅನ್ಯ ದೇವನಿಲ್ಲ ಎಂದು ನಾನು ನಂಬುತ್ತೇನೆ ಎಂದು ಹೇಳಿದ್ದನು. ಆದರೆ ನನ್ನ ಸಮುದಾಯದ ವಿರೋಧಿಯಾದ ಫಿರ್‌ಔನ್ ಹಗೆತನದಲ್ಲೂ ಅವಿಶ್ವಾಸದಲ್ಲೂ ಬಹಳ ತೀವ್ರ ರೂಪದಲ್ಲಿದ್ದನು.

ಅಬೂಜಹಲನ ಶಿರವನ್ನು ಕಂಡಾಗ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರೆಂದು ಸಹ ವರದಿಯಾಗಿದೆ: **ಅಲ್ಲಾಹುಲ್ಲಝೀ ಲಾಇಲಾಹ ಇಲ್ಲಾ ಹುವ** – ಅಲ್ಲಾಹನ ಹೊರತು ಅನ್ಯ ಆರಾಧ್ಯನಿಲ್ಲ. ಅವರು ಮೂರು ಸಾರಿ ಹೀಗೆ ಹೇಳಿದರು:

**ಅಲ್‌ಹಮ್‌ದುಲಿಲ್ಲಾಹಿಲ್ಲದೀ: ಅಇಝ್ಝುಲ್ ಇಸ್ಲಾಮ ವಅಹ್ಲಹೂ –** ಇಸ್ಲಾಮ್ ಮತ್ತು ಅದನ್ನು ನಂಬುವವರಿಗೆ ಗೌರವ ನೀಡಿದ ಅಲ್ಲಾಹನಿಗೆ ಸರ್ವಸ್ತುತಿಗಳು ಅರ್ಹವಾಗಿದೆ. ಇನ್ನೊಂದು ವರದಿಯಲ್ಲಿ ಹೀಗೆ ಸಹ ಇದೆ: ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿಶ್ಚಯವಾಗಿಯೂ ಪ್ರತಿಯೊಂದು ಸಮುದಾಯಕ್ಕೆ ವಿರೋಧಿಯಾಗಿ ಒಬ್ಬ ಫಿರ್‌ಔನ್ ಇರುತ್ತಾನೆ. ಈ ಸಮುದಾಯದ ಫಿರ್‌ಔನ್ ಅಬೂಜಹಲನಾಗಿದ್ದನು. ಅವನು ಬಹಳ ಕೆಟ್ಟ ರೀತಿಯಲ್ಲಿ ಕೊಲಲ್ಪಟ್ಟನು.

ಹಝ್ರತ್ ಮುಆಝ್ ಬಿನ್ ಅಮರ್ ಬಿನ್ ಜಮೂಹ್ ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು. ಹಝ್ರತ್ ಉಸ್ಮಾನ್(ರ) ಅವರ ಜನಾಝ ನಮಾಝ್ ನಿರ್ವಹಿಸಿದರು. ಅವರನ್ನು ಜನ್ನತುಲ್ ಬಖೀಅ ಖಬರಸ್ಥಾನದಲ್ಲಿ ದಫನು ಗೊಳಿಸಲಾಯಿತು. ಹಝ್ರತ್ ಅಬೂಹುರೈರ ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಮುಆಝ್ ಬಿನ್ ಅಮರ್ ಎಷ್ಟು ಒಳ್ಳೆಯವರಾಗಿದ್ದಾರೆ ಎಂದು.

ಅಲ್ಲಾಹನು ಸಾವಿರ ಗಟ್ಟಲೆ ಕಾರುಣ್ಯವನ್ನು ಅವರ ಮೇಲೆ ಸುರಿಸಲಿ. ಅಲ್ಲಾಹನ ಮತ್ತು ಅವನ ಹಬೀಬರ ಪ್ರೀತಿಯಲ್ಲಿ ಮುಳುಗಿ ಅವರ ಸಂತೃಪ್ತಿ ಗಳಿಸುವವರಿಗೆ ಅಲ್ಲಾಹನು ಕಾರುಣ್ಯ ಸುರಿಸಲಿ – ಆಮೀನ್.

ಜುಮುಅ ನಮಾಝ್ ನಂತರ ಒಬ್ಬರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು. ಮುಕರ್ರಮ್ ಮಲಿಕ್ ಸುಲ್ತಾನ್ ಹಾರೂನ್ ಖಾನ್ ಸಾಹಿಬ್. ಮಾರ್ಚ್ 27ರಂದು ಇಸ್ಲಾಮಾಬಾದ್‌ನಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರ ಹಿರಿಯ ಪುತ್ರ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರ ಅಳಿಯನಾಗಿದ್ದಾರೆ. ಅವರ ಪಿತ ಕರ್ನಲ್ ಮಲಿಕ್ ಸುಲ್ತಾನ್ ಮುಹಮ್ಮದ್ ಖಾನ್. ಅವರು ತನ್ನ 23ನೇ ವಯಸ್ಸಿನಲ್ಲಿ 1923ರಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಕೈಯ್ಯಲ್ಲಿ ಬೈಅತ್ ಮಾಡಿದ್ದರು. ಅವರು ತನ್ನ ಕುಟುಂಬದ ಏಕ ಮಾತ್ರ ಅಹ್ಮದಿ ಆಗಿದ್ದರು. ಮೃತರ ಸಹೋದರಿ ರಾಶಿದ ಸಯ್ಯಾಲ್ ಸಾಹಿಬ ಹೇಳುತ್ತಾರೆ: ನನ್ನ ಸಹೋದರ ಸುಲ್ತಾನ್ ಹಾರೂನ್ ಖಾನ್ ಅನೇಕ ಸದ್ಗುಣಗಳ ಒಡೆಯರಾಗಿದ್ದರು. ಅಹ್ಮದಿಯ್ಯತ್ ಬಗ್ಗೆ ಅತ್ಯಂತ ಹೆಚ್ಚು ಅಭಿಮಾನ ಹೊಂದಿದ್ದರು. ಖಿಲಾಫತ್‌ಗೋಸ್ಕರ ಜೀವಾರ್ಪಣೆ ಮಾಡುವ ಸ್ನೇಹಿತರ ಸತ್ಯಸಂಧ ಸ್ನೇಹಿತರೂ ಶತ್ರುಗಳ ತೀವ್ರ ವಿರೋಧಿಯೂ ಆಗಿದ್ದರು. ಬಡವರ ಮತ್ತು ನಿರ್ಗತಿಕರ ಆಶ್ರಯದಾತರಾಗಿದ್ದರು. ಅಲ್ಲಾಹನು ಅವರೊಂದಿಗೆ ರಹ್ಮತ್ ಮತ್ತು ಮಗ್‌ಫಿರತ್‌ನೊಂದಿಗೆ ವರ್ತಿಸಲಿ. ಅವರ ಮಕ್ಕಳನ್ನು ಅವರ ಒಳಿತುಗಳಲ್ಲಿ ನೆಲೆನಿಲ್ಲಿಸಲಿ. ಅವರನ್ನು ಜಮಾಅತ್ ಮತ್ತು ಖಿಲಾಫತ್‌ನೊಂದಿಗೆ ಜೋಡಿಸಿ ಇರಿಸುವವನಾಗಲಿ – ಆಮೀನ್.

———————*****———————


***Friday Sermon delivered by Hadrath Khaleefatul Masih Al Khamis****(atba)*

*At,Masjid Baithul Futhuh London, UK. On 05-04-2019.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha’at Team for Nazarath Nashr-O-Isha’ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon